ಆ) ಇಂತಹ ಕಾರ್ಖಾನೆಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ॥ ಎ.ಬಿ ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ರಾಜ್ಯದಲ್ಲಿ ವಾಯುಮಾಲಿನ್ಯ ಕುರಿತಂತೆ 216 ಕಾರ್ಖಾನೆಗಳ ವಿರುದ್ಧ ದೂರು ದಾಖಲಾಗಿರುತ್ತದೆ, ವರ್ಷವಾರು ವಿವರ ಈ ಕೆಳಗಿನಂತೆ ಇರುತ್ತದೆ

2001 ವರ್ಷ – 50

2002 ವರ್ಷ – 75

2003 ವರ್ಷ – 91

ಒಟ್ಟು – 216

ಆ) ಮಂಡಳಿಯು ಇಂತಹ ಕಾರ್ಖಾನೆಗಳ ವಿರುದ್ಧ ಜರುಗಿಸಿದ ಕ್ರಮ ಈ ಕೆಳಕಂಡಂತೆ ಇದೆ

ತೆಗೆದುಕೊಂಡ ಕ್ರಮಗಳು	2001	2002	2003
ಕಾರಣ ಕೇಳುವ ನೋಟೀಸ್	43	52	78
ನಿರ್ದೇಶನಗಳು	1	3	5
ಮುಚ್ಚುವ ಆದೇಶಗಳು	5	18	7
ಕ್ರಿಮಿನಲ್ ಮೊಕದ್ದಮೆಗಳು	1	2	1
ಮೇಲಿನ ಕ್ರಮ ಆಧಾರದ ಮೇಲೆ ಮಾಲಿನ್ಯ ಕ್ರಮಗಳನ್ನು ಅನುಸರಣೆ ಮಾಡಿದ ಉದ್ದಿಮೆಗಳು	35	37	52

ರಾಜ್ಯದಲ್ಲಿ ಜನಮೆಚ್ಚಿದ ಶಿಕ್ಷಕ ಪ್ರಶಸ್ತಿ ಕುರಿತು

196 (531) ಶ್ರೀ ಎಸ್ ಸುರೇಶ್ ಕುಮಾರ್ (ರಾಜಾಜಿನಗರ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜನಮೆಚ್ಚಿದ ಶಿಕ್ಷಕ ಪ್ರಶಸ್ತಿಯನ್ನು ರಾಜ್ಯದಲ್ಲಿ ಎಂದಿನಿಂದ ಜಾರಿಗೆ ತರಲಾಗಿದೆ

ಆ) ಈ ಪ್ರಶಸ್ತಿಗೆ ಶಿಕ್ಷಕರುಗಳನ್ನು ಆಯ್ಕೆ ಮಾಡಲು ಅನುಸರಿಸಿರುವ ಮಾನದಂಡಗಳೇನು

ಇ) ಈ ಪ್ರಶಸ್ತಿಗೆ ನಡೆದಿರುವ ಆಯ್ಕೆಯಲ್ಲಿ ನ್ಯೂನತೆಗಳೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಸರ್ಕಾರ ಈ ಕುರಿತು ಏನಾದರೂ ಬದಲಾವಣೆಯನ್ನು ಯೋಜಿಸಿದೆಯೇ?

ಪ್ರೊ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 2001–03ನೇ ಸಾಲಿನಿಂದ ಜಾರಿಗೆ ತರಲಾಗಿದೆ

ಆ) ಪ್ರಶಸ್ತಿಗೆ ಶಿಕ್ಷಕರನ್ನು ಆಯ್ಕೆ ಮಾಡಲು ತಾಲ್ಲೂಕು ಮಟ್ಟದ ಸಮಿತಿ ಎಸ್ ಡಿ ಎಂ ಸಿ ಯಿಂದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಆಯ್ಕೆ ಮಾಡುತ್ತದೆ

1 ಶಿಕ್ಷಕರು ಮಾನ್ಯತೆ ಪಡೆದ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರಬೇಕು

2 ಕನಿಷ್ಠ 5 ವರ್ಷಗಳ ಉತ್ತಮ ಸೇವೆ ಸಲ್ಲಿಸಿರಬೇಕು

3 ವಿದ್ಯಾರ್ಥಿಗಳನ್ನು ಒಳ್ಳೆಯ ಮನುಷ್ಯನನ್ನಾಗಿ, ಉತ್ತಮ ಪ್ರಜೆಗಳನ್ನಾಗಿ ಮಾಡುವಲ್ಲಿ ಕ್ರಮ ವಹಿಸಿರಬೇಕು

4 ವಿದ್ಯಾರ್ಥಿಗಳ ವಿವಿಧ ಕಲಿಕಾ ಮತ್ತು ಇತರೆ ಸಾಮರ್ಥ್ಯಗಳನ್ನು ಶೇಷ್ಠವಾಗಿ ಅಭಿವೃದ್ಧಿ ಪಡಿಸಿರಬೇಕು

5 ಶಿಕ್ಷಕರ ಮೇಲೆ ಶಿಸ್ತಿನ ಕ್ರಮ ಇರಬಾರದು

6. ಶಿಕ್ಷಕರು ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರವಾಗಿರಬೇಕು

7 ಪ್ರಾಥಮಿಕ ಶಿಕ್ಷಣ ಉನ್ನತಿಗಾಗಿ ಶಾಲಾ ಕರ್ತವ್ಯಗಳನ್ನು ನಿರ್ವಹಿಸಿರಬೇಕು

8 ಈಗಾಗಲೇ ರಾಷ್ಟ್ರ/ ರಾಜ್ಯ/ ಜಿಲ್ಲಾಮಟ್ಟದಲ್ಲಿ ಪ್ರಶಸ್ತಿ ಪಡೆದಿರುವ ಶಿಕ್ಷಕರನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ

ಇ) ಇಲ್ಲ

ಈ) ಪರಿಶೀಲನೆಯಲ್ಲಿದೆ

ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹೋಮಿಯೋಪತಿ ವೈದ್ಯಕೀಯ ಕಾಲೇಜಿನ ಕಟ್ಟಡ ನಿರ್ಮಾಣ ಕಾರ್ಯ

198 (533) ಶ್ರೀ ಎಸ್ ಸುರೇಶ್ ಕುಮಾರ್ (ರಾಜಾಜಿನಗರ) ಮಾನ್ಯ ವೈದ್ಯಕೀಯ ಶಿಕ್ಷಣ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜಾಜಿನಗರ ವಿಧಾನ ಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹೋಮಿಯೋಪತಿ ವೈದ್ಯಕೀಯ ಕಾಲೇಜಿನ ಕಟ್ಟಡ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭವಾಯಿತು,

ಆ) ಎಷ್ಟು ಹಂತದ ಕಾಮಗಾರಿ ಪೂರ್ಣಗೊಂಡಿದೆ

ಇ) ಕಟ್ಟಡದ ನಿರ್ಮಾಣ ಸಂಪೂರ್ಣವಾಗಿ ಆಗಲು ಇನ್ನು ಎಷ್ಟು ಕಾಲ ಬೇಕು

ಈ) ಈಗ ಹೋಮಿಯೋಪತಿ ಕಾಲೇಜು ನಡೆಯುತ್ತಿರುವ ಖಾಸಗಿ ಕಟ್ಟಡಕ್ಕೆ ನೀಡಲಾಗುತ್ತಿರುವ ಮಾಸಿಕ ಬಾಡಿಗೆ ಎಷ್ಟು?

ಡಾ॥ ಎ ಬಿ ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಸರ್ಕಾರಿ ಹೋಮಿಯೋಪತಿ ವೈದ್ಯಕೀಯ ಕಾಲೇಜಿನ ಕಟ್ಟಡದ ಕಾಮಗಾರಿಯನ್ನು ಸೆಪ್ಟೆಂಬರ್ 1997ರಲ್ಲಿ ಪ್ರಾರಂಭಿಸಲಾಯಿತು

ಆ) ಪ್ರಥಮ ಹಂತದ ಕಾಮಗಾರಿಯು ಪೂರ್ಣಗೊಂಡಿದೆ

ಇ) 2ನೇ ಹಂತದ ಕಟ್ಟಡದ ನಿರ್ಮಾಣದ ಸಂಪೂರ್ಣ ಕಾಮಗಾರಿಯನ್ನು ಅಗತ್ಯವಾದ ಆಯವ್ಯಯವನ್ನು ಕ್ರೋಢೀಕರಿಸಿ ಅತಿ ಶೀಘ್ರದಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ 2001–02 ನೇ ಸಾಲಿನಲ್ಲಿ ಭೂಸೇನಾ ನಿಗಮಕ್ಕೆ ರೂ 25 00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ ಪ್ರಸಕ್ತ ಸಾಲಿನಲ್ಲಿ ಆಯವ್ಯಯದ ಕೊರತೆಯಿಂದಾಗಿ ಕಾಮಗಾರಿಯು ಸ್ಥಗಿತಗೊಂಡಿರುತ್ತದೆ

ಈ) ಈಗ ಈ ಕಾಲೇಜು ನಡೆಯುತ್ತಿರುವ ಖಾಸಗಿ ಕಟ್ಟಡಕ್ಕೆ ನೀಡಲಾಗುತ್ತಿರುವ ಮಾಸಿಕ ಬಾಡಿಗೆ ರೂ 1,04,508–00 ಮಾತ್ರ